ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆವಿಗೂ 23 ಕಿಂಡಿ ಅಣೆಕಟ್ಟು (1457.95 ಹೆಕ್ಟೇರ್) ಹಾಗೂ 7(652) ಹೆಕ್ಟೇರ್ ಉಪ್ಪುನೀರು ತಡೆ ಅಣ್ಣೆಕಟ್ಟಗಳನ್ನು ನಿರ್ಮಿಸಲಾಗಿದ್ದು, ನಿರ್ವಹಣೆಯಲ್ಲಿರುತ್ತದೆ. ಈ ಯೋಜನೆಗಳಿಂದ 2109.95 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಈ ಕಿಂಡಿ ಅಣ್ಣೆಕಟ್ಟುಗಳಲ್ಲಿ ನೀರು ಶೇಖರಣೆಯಾಗಿ ಅಂತರ್ಜಲ ಮಟ್ಟ ಏರುವಿಕೆ ನಿರೀಕ್ಷಿಸಲಾಗಿದೆ.

ರೂ. 153.45 ಲಕ್ಷ ಮೊತ್ತದ 8 ಕಿಂಡಿ ಅಣೆಕಟ್ಟು ಪ್ರಗತಿಯಲ್ಲಿದ್ದು ಅದರಿಂದ 399.87 ಹೆಕ್ಟೇರ್‌ಗೆ ನೀರಾವರಿ ಆಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮವಾಹಿನಿ ಯೋಜನೆಯಡಿ ದಕ್ಷಿಣ ವಲಯದಲ್ಲಿ 435 ಹೊಸ ಕಿಂಡಿ ಅಣ್ಣೆಕಟ್ಟುಗಳನ್ನು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಮತ್ತು ಹೊಳೆಗಳ ಅಡ್ಡಲಾಗಿ ರೂ. 101.80 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಸಮಗ್ರ ಯೋಜನೆಯನ್ನು ತಯಾರಿಸಲಾಗಿದೆ.

ಈ ಯೋಜನೆಯಿಂದ 13446.30 ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲಗಿಸಲು ಯೋಜಿಸಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಧನ ಸಹಾಯ ಪಡೆಯಲು ಉದ್ದೇಶಿಸಲಾಗಿದೆ.

ಕ್ಯೊಲ ಜಾನುವಾರು ಕೇಂದ್ರ

641(986) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕ್ಯೊಲ ಜಾನುವಾರು ಕೇಂದ್ರದಲ್ಲಿ ಪ್ರಸ್ತುತ ಇರುವ ಜಾನುವಾರುಗಳ ಸಂಖ್ಯೆ ಎಷ್ಟು; ದಿನವಹಿ ಹಾಲು ಉತ್ಪಾದನೆ ಎಷ್ಟು: ಇತರ ವಿವಿಧ ಜಾನುವಾರು ಮತ್ತು ಅವುಗಳ ಸಂಖ್ಯೆ ಎಷ್ಟು:

ಆ) ಈ ಕೇಂದ್ರದ ಒಟ್ಟು ವಿಸ್ತೀರ್ಣವೆಷ್ಟು ಮತ್ತು ಇದನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ.

ಇ) ಕ್ಯೊಲದಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪಿಸುವ ಇಚ್ಚೆ ಸರಕಾರಕ್ಕಿದೆಯೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಜಾನುವಾರುಗಳು 40

ಬೀಜದ ಕೋಣಗಳು 10

ಯಾಕ್ಷೇರ ಹಂದಿಗಳು 46

ದಿನವಹಿ ಹಾಲು ಉತ್ಪಾದನೆ 70 ಕೆ.ಜಿ

ಆ) ಒಟ್ಟು 308 ಹೆಕ್ಟೇರು ವಿಸ್ತೀರ್ಣವಿದ್ದು, ಇದರಲ್ಲಿ 102 ಹೆಕ್ಟೇರುಗಳಲ್ಲಿ ಸಾಮಾಜಿಕ ಅರಣ್ಯ ಬೆಳೆಸುವ, 121 ಹೆಕ್ಟೇರು ಹುಲ್ಲುಗಾವಲು, 12 ಹೆಕ್ಟೇರು ಮೇವು ಬೆಳೆಯುವ ನೀರಾವರಿ,

16 ಹೆಕ್ಟೇರು ಮಳೆ ಆಶ್ರಯದ ಮೇವು ಬೆಳೆಯುವ ಭೂಮಿ ಮತ್ತು 57 ಹೆಕ್ಟೇರು ನೈಸರ್ಗಿಕ ಅರಣ್ಯ ಪ್ರದೇಶ ಸೇರಿದೆ.

ಇ) ಪ್ರಸ್ತುತ ಇಂಥಹ ಪ್ರಸ್ತಾವನೆ ಇರುವುದಿಲ್ಲ.

ಬಾಗೇಪಲ್ಲಿ ತಾಲ್ಲೂಕಿನಿಂದ ಹಜ್ ಯಾತ್ರಿಗಳ ಬಗ್ಗೆ

642(810) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕುನಾದ್ಯಂತ ಕಳೆದ ಸಾಲಿನಲ್ಲಿ ಹೆಜ್ ಯಾತ್ರೆಗೆ ಸರ್ಕಾರವು ಆಯ್ಕೆ ಮಾಡಿ ಕಳುಹಿಸಿದ ಮುಸ್ಲಿಂಬಾಂಧವರ ಫಲಾನುಭವಿಗಳ ಸಂಖ್ಯೆ ಎಷ್ಟು? ವಿವರ ಒದಗಿಸುವುದು.

ಆ) ಈ ಹಜ್ ಯಾತ್ರೆಗೆ ಸರ್ಕಾರವು ಪ್ರತಿಯೊಬ್ಬ ಮುಸ್ಲಿಂ ಬಾಂಧವರಿಗೆ ಖರ್ಚು ಮಾಡಲಾದ ವೆಚ್ಚವೆಷ್ಟು? ವಿವರ ಒದಗಿಸುವುದು.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 2001-2002ನೇ ಸಾಲಿನ ಹಜ್ ಯಾತ್ರೆಗೆ ಬಾಗೇಪಲ್ಲಿ ತಾಲ್ಲೂಕಿನಿಂದ ಯಾವುದೇ ವ್ಯಕ್ತಿಯನ್ನು ಹಜ್ ಯಾತ್ರೆಗೆ ಆಯ್ಕೆ ಮಾಡಿರುವುದಿಲ್ಲ. ಸರ್ಕಾರವು ಹಜ್‌ಗಾಗಿ ಜನರಿಂದ ಯಾರನ್ನು ಆಯ್ಕೆ ಮಾಡುವುದಿಲ್ಲ. ಮುಸ್ಲಿಂ ತಾವಾಗಿಯೇ ಈ ಯಾತ್ರೆಯನ್ನು ಕೈಗೊಳ್ಳುವರು.

ಆ) ರಾಜ್ಯ ಸರ್ಕಾರವು ಹಜ್ ಯಾತ್ರೆಗೆ ಕೈಗೊಳ್ಳಲು ಯಾವುದೇ ಹಜ್ ಯಾತ್ರಿಕರಿಗೆ ಧನಸಹಾಯ ನೀಡುತ್ತಿಲ್ಲ.

ಬಾಗೇಪಲ್ಲಿಯಲ್ಲಿ ಮುಸ್ಲಿಂ ಮಸೀದಿ ಮತ್ತು ರುದ್ರಭೂಮಿಗಳ ವ್ಯವಸ್ಥೆ

643(811) ಶ್ರೀ ಸಂಪಂಗಿ ಎನ್. ಎಂ.ಎಲ್.ಎ (ಬಾಗೇಪಲ್ಲಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮುಸ್ಲಿಂ ಭಾಂದವರ ಮಸೀದಿ ಹಾಗೂ ರುದ್ರಭೂಮಿಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

ಆ) ಈ ಮುಸ್ಲಿಂ ಭಾಂದವರ ಮಸೀದಿ ಹಾಗೂ ರುದ್ರಭೂಮಿಗಳ ರಕ್ಷಣೆಗೆ ಸರ್ಕಾರವು ಇದುವರೆಗೂ ಬಿಡುಗಡೆ ಮಾಡಿದ ಒಟ್ಟು ಮೊತ್ತ ಎಷ್ಟು? ವಿವರ ಒದಗಿಸುವುದು.

ಇ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಅವ್ಯವಸ್ಥೆಯ ಸ್ಥಿತಿಯಲ್ಲಿರುವ ಮಸೀದಿ ಹಾಗೂ ರುದ್ರಭೂಮಿಯ ಸಂಖ್ಯೆಗಳು ಎಷ್ಟು ಇವುಗಳ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ 17 ಮಸೀದಿಗಳು ಮತ್ತು 48 ಖಬರಸ್ತಾನಗಳಿವೆ.